ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಾಮರಾಜನಗರ.

**ಸಿಸಿ ಸಂಖ್ಯೆ: 44/2020**

**ಫಿರ್ಯಾದಿ** : **ವಿಜಯಕುಮಾರ್.ಡಿ.ಎಸ್.** ,
ಬಿನ್ ಸಾಕಯ್ಯ ,
ವಯಸ್ಸು 46 ವರ್ಷ,
ವಾಸಃ ದೊಡ್ಡರಾಯಪೇಟೆ ಗ್ರಾಮ,
ಕಸಬಾ ಹೋಬಳಿ,
ಚಾಮರಾಜನಗರ ತಾಲ್ಲೂಕು,
ಚಾಮರಾಜನಗರ ಜಿಲ್ಲೆ.

**ವಿರುದ್ಧ**

**ಆರೋಪಿ** : **ಮೊಹಮ್ಮದ್ ಅಸ್ಲಂ ಪಾಷ್** .
ಬಿನ್ ಲೇಟ್ ಅಬ್ದುಲ್ ಗಫರ್ ,
ವಯಸ್ಸು 55 ವರ್ಷ,
ಕೇರ್ ಆಫ್ ಸೈಯದ್ ಸಿಬ್ಗತ್ ವುಲ್ಲಾ,
ನಂ.14/205, ಮುಬಾರಕ್ ಮೊಹಲ್ಲಾ,
ಚಾಮರಾಜನಗರ ಟೌನ್ ಮತ್ತು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ 313 ರನ್ವಯ ಆರೋಪಿತರ ಹೇಳಿಕೆ**

**ಪ್ರಶ್ನೆ** :1: ಈ ಪ್ರಕರಣದಲ್ಲಿ ಫಿರ್ಯಾದಿದಾರರ ಪರ ವಿಚಾರಣೆ ಮಾಡಿದ ಸಾಕ್ಷಿಯ ಹೇಳಿಕೆಯನ್ನು ಕೇಳಿ ಅರ್ಥ ಮಾಡಿಕೊಂಡಿದ್ದೀರಾ ?

**ಉತ್ತರಃ**

**ಪ್ರಶ್ನೆ** :2: ಫ್ರಾಸಾಃ1-ಶ್ರೀ **ವಿಜಯಕುಮಾರ್.ಡಿ.ಎಸ್.** ರವರು ತಮ್ಮ ಹೇಳಿಕೆಯಲ್ಲಿ ಆರೋಪಿಯಾದ ನೀವು ನಿಮ್ಮ ಗೃಹಕೃತದ ಅವಶ್ಯಕತೆಗಾಗಿ ದಿನಾಂಕ 12.07.2019ರಂದು ರೂ.2,00,000/-ಗಳ ಹಣವನ್ನು ಫಿರ್ಯಾದಿದಾರರಿಂದ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಮರುಪಾವತಿಗಾಗಿ ಆರೋಪಿಯಾದ ನೀವು **ಚಾಮರಾಜನಗರದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ**ರುವ ನಿಮ್ಮ ಖಾತೆಗೆ ಸಂಬಂಧಪಟ್ಟ ಚೆಕ್ ಸಂಖ್ಯೆ **010867ರಲ್ಲಿ** ರೂ.2,00,000/- ದಿನಾಂಕ 12.07.2019 ಎಂದು ನಮೂದು ಮಾಡಿ ಚೆಕ್ಕನ್ನು ಫ್ರಾಸಾಃ1 ರವರಿಗೆ ನೀವು ನೀಡಿ ಹಣವನ್ನು ನಗದೀಕರಣಗೊಳಿಸಿಕೊಳ್ಳುವಂತೆ ಸೂಚಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರ:**

**ಪ್ರಶ್ನೆ**:3: ಫ್ರಾಸಾಃ1 ರವರು ಮುಂದುವರಿದು, **ಚಾಮರಾಜನಗರದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ**ಗೆ ನೀವು ನೀಡಿದ ಈ ಮೇಲೆ ಹೇಳಿದ ಚೆಕ್ಕನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ **"FUNDS INSUFFICIENT''** ಎಂಬ ಕಾರಣ ನೀಡಿ, ಚೆಕ್ ಅಮಾನ್ಯಗೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರ**:

**ಪ್ರಶ್ನೆ**:4: ಫ್ರಾಸಾಃ1 ರವರು ಮುಂದುವರಿದು ಈ ಬಗ್ಗೆ ಫಿರ್ಯಾದಿದಾರರು ದಿಃ 21.09.2019ರಂದು ನಿಮಗೆ ನೊಂದಾಯಿತ ಅಂಚೆ ಮೂಲಕ ನೋಟಿಸ್ ಕಳುಹಿಸಿದ್ದು, ಚೆಕ್ ಹಣವನ್ನು ಮರುಪಾವತಿ ಮಾಡುವಂತೆ ವಿನಂತಿಸಿಕೊಂಡರೂ ಸಹ ಆರೋಪಿಯಾದ ನೀವು ಯಾವುದೇ ಕ್ರಮ ಕೈಗೊಳ್ಳದೆ ಫಿರ್ಯಾದುದಾರರನ್ನು ಮೋಸಗೊಳಿಸಲು ಉದ್ದೇಶಪೂರ್ವಕವಾಗಿ ಸದರಿ ಚೆಕ್ ಅನ್ನು ಕೊಟ್ಟಿರುತ್ತೀರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರ**:

**ಪ್ರಶ್ನೆ**:5: ನೀವು ಈ ಪ್ರಕರಣದ ಬಗ್ಗೆ ಇನ್ನೇನಾದರೂ ಹೆಚ್ಚಿನ ವಿಷಯಗಳನ್ನು ಹೇಳಲು ಬಯಸುವಿರಾ?

**ಉತ್ತರ**:

**ಪ್ರಶ್ನೆ**:6: ನೀವು ನಿಮ್ಮ ಪರವಾದ ಯಾವುದಾದರೂ ಸಾಕ್ಷ್ಯವನ್ನು ಮತ್ತು ದಾಖಲೆಗಳನ್ನು ಹಾಜರುಪಡಿಸುತ್ತೀರಾ ?

**ಉತ್ತರ**:

ನನ್ನ ಸಮಕ್ಷಮದಲ್ಲಿ ಆರೋಪಿತರ ವಿಚಾರಣೆಯನ್ನು ನಡೆಸಿದ್ದು, ಆರೋಪಿತರು ನೀಡಿದ ಉತ್ತರವನ್ನು ಯಥವತ್ತಾಗಿ ಮತ್ತು ಸಂಪೂರ್ಣವಾಗಿ ದಾಖಲು ಮಾಡಿಕೊಂಡಿದ್ದೇನೆಂದು ಈ ಮೂಲಕ ದೃಢಪಡಿಸುತ್ತೇನೆ.

ದಿನಾಂಕಃ 24.09.2025ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಚಾಮರಾಜನಗರ.